ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: DCE/BUD/GCC/1/2023-E-1016214

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ.
ಬೆಂಗಳೂರು ದಿನಾಂಕ:05.06.2023.

ಸುತ್ತೋಲೆ

ವಿಷಯ: ಹಿಂದಿನ ವರ್ಷಗಳ ವೇತನ ಬಾಕಿ ಮತ್ತು ಇತರೆ ಬಾಕಿಗಳನ್ನು ಪಾವತಿಸಲು ಅವಶ್ಯವಿರುವ ಅನುದಾನದ ಮಾಹಿತಿಯನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ: 1.ಸರ್ಕಾರದ ಸುತ್ತೋಲೆ ಸಂಖ್ಯೆ :ಆಇ :01 :ಟಿ.ಎಫ್.ಪಿ :2023 ದಿನಾಂಕ:09.02.2023

2.ಈ ಕಛೇರಿಯ ಸುತ್ತೋಲೆ :DCE/BUD/GCC/1/2023 ದಿನಾಂಕ:07.03.2023

*****

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ, ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು/ಖಾಸಗಿ ಅನುದಾನಿತ ಪದವಿ, ಬಿ.ಎಡ್ ಮತ್ತು ಚಿತ್ರಕಲಾ ಕಾಲೇಜುಗಳ ಬೋಧಕರು ಮತ್ತು ಕಛೇರಿ ಸಿಬ್ಬಂದಿಗಳ ಹಿಂದಿನ ವರ್ಷಗಳ ವೇತನ ಬಾಕಿ ಮತ್ತು ಇತರೆ ಬಾಕಿಗಳನ್ನು ಪಾವತಿಸಲು ಉಲ್ಲೇಖ(01) ಮತ್ತು (02)ರ ಸುತ್ತೋಲೆಯಲ್ಲಿ 2022-23ನೇ ಸಾಲು ಹಾಗೂ ಹಿಂದಿನ ವರ್ಷಗಳ ವೇತನ ಬಾಕಿ ಸೆಳೆಯಲು ಆರ್ಥಿಕ ಇಲಾಖೆಯ ಸಹಮತಿ ನೀಡಿರುವಂತೆ ಅನುಮತಿ ನೀಡಲಾಗಿರುತ್ತದೆ.

ಆದಾಗ್ಯೂ ಹಿಂದಿನ ವರ್ಷಗಳ ವಿವಿಧ ಬಾಕಿ/ವೇತನ ಬಾಕಿಗಳಿಗಾಗಿ 2023-24ನೇ ಸಾಲಿನಲ್ಲಿ ಅನುದಾನ ಬಿಡುಗಡೆ ಮಾಡುವಂತೆ ಪ್ರಾಂಶುಪಾಲರುಗಳಿಂದ/ ಜಂಟಿನಿರ್ದೇಶಕರುಗಳಿಂದ ಪ್ರಸ್ತಾವನೆಗಳು ಸ್ವೀಕೃತವಾಗುತ್ತಿರುವುದನ್ನು ಗಮನಿಸಲಾಗಿದೆ.

ಹಿಂದಿನ ವರ್ಷಗಳ ಬಾಕಿಗಳನ್ನು ಸೆಳೆಯಲು ಸರ್ಕಾರದ ಪೂರ್ವಾನುಮತಿ ಅವಶ್ಯವಿದ್ದು ಸೂಕ್ತ ಕಾರಣಗಳೊಂದಿಗೆ ಕ್ರೋಢೀಕೃತ ಪ್ರಸ್ತಾವನೆ ಸಲ್ಲಿಸಬೇಕಾಗಿರುತ್ತದೆ. ಅದ್ದರಿಂದ ಇಲಾಖಾ ವ್ಯಾಪ್ತಿಯ ಜಂಟಿ ನಿರ್ದೇಶಕರುಗಳು ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳು ಹಿಂದಿನ ವರ್ಷಗಳ ವೇತನ ಬಾಕಿ ಮತ್ತು ಇತರೆ ಬಾಕಿಗಳನ್ನು ಪಾವತಿಸಲು ಅವಶ್ಯವಿರುವ ಅನುದಾನದ ಮಾಹಿತಿಯನ್ನು ಅನುಬಂಧ-1&2 ರಲ್ಲಿ ಸಲ್ಲಿಸುವಂತೆ ಸೂಚಿಸಲಾಗಿದೆ.

ಈಗಾಗಲೇ ವೇತನ ಬಾಕಿ ಮತ್ತು ಇತರೆ ಬಾಕಿಗಳಿಗೆ ಸಂಬಂಧಿಸಿದಂತೆ ಬಿಲ್ ಖಜಾನೆಗೆ/ಉಪಖಜಾನೆಗಳಿಗೆ ಸಲ್ಲಿಕೆಯಾಗಿ ವಿವಿಧ ಕಾರಣಗಳಿಂದ ತಿರಸ್ಕೃತವಾಗಿದ್ದಲ್ಲಿ ಸದರಿ ಬಿಲ್ ಪ್ರತಿ ಮತ್ತು ಆಕ್ಷೇಪಣಾ ಹಿಂಬರಹದ ವಿವರಗಳೊಂದಿಗೆ ಪ್ರಸ್ತಾವನೆ ಸಲ್ಲಿಸುವುದು. ಹಾಗೂ ಕೇಂದ್ರ ಕಛೇರಿಗೆ ವಿವಿಧ ಬಾಕಿ ಸಂಬಂಧ ಪತ್ರ ವ್ಯವಹಾರ ಮಾಡಿದ್ದರೂ ಸಹ ಮತ್ತೊಮ್ಮೆ ಪ್ರಸ್ತಾವನೆ ಸಲ್ಲಿಸುವುದು ಹಾಗೂ ಹಣ ಸೆಳೆಯುವ ಅಧಿಕಾರಿಗಳು ತಮ್ಮ ವೈಯಕ್ತಿಕ ಗಮನ ಹರಿಸಿ ದಿನಾಂಕ: 09.06.2023ರ ಒಳಗಾಗಿ ಮಾಹಿತಿಯನ್ನು ಸಲ್ಲಿಸಲು ಸೂಚಿಸಿದೆ. (ಸಾಫ್ಟ್ ಕಾಪಿಯನ್ನು ಇ ಮೇಲ್ ವಿಳಾಸ : dcebudget2023@gmail.com ಕ್ಕೆ ರವಾನಿಸುವುದು.)

(ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

ಕಾಲೇಜು ಶಿಕ್ಷಣ ನಿರ್ದೇಶಕರು.

ಇವರಿಗೆ:

ಇಲಾಖಾ ವ್ಯಾಪ್ತಿಯ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರು ಮತ್ತು ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳು

---2

ಪ್ರಸ್ತಾವನೆಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು:

1. HRMS Arrears Report (Before Approval Copy) ದೃಢೀಕೃತ ಪ್ರತಿ.
2. ಬೋಧಕರು /ತತ್ಸಮಾನ ವೃಂದದವರು ಮತ್ತು ಕಛೇರಿ ಸಿಬ್ಬಂದಿಗಳ ವಿವಿಧ ವೇತನ ಬಾಕಿಗೆ (Phd/AGP/Others) ಗೆ ಸಂಬಂಧಿಸಿದಂತೆ ವೇತನ ನಿಗಧೀಕರಣದ ಆದೇಶ ಪ್ರತಿ. ಇಲಾಖಾ ಆದೇಶ & AG Slip ಅನ್ನು ದೃಢೀಕರಿಸಿ ಕಡ್ಡಾಯವಾಗಿ ಸಲ್ಲಿಸುವುದು.
3. Non Drawn Certificate by DDO
4. ಪ್ರಾದೇಶಿಕ ಜಂಟಿ ನಿರ್ದೇಶಕರುಗಳು ಖಾಸಗಿ ಅನುದಾನಿತ ಪದವಿ, ಬಿ.ಎಡ್. ಚಿತ್ರಕಲಾ ಕಾಲೇಜುಗಳ ನೌಕರರುಗಳ ಹಿಂಬಾಕಿ ವಿವರಗಳನ್ನು ಪ್ರತ್ಯೇಕವಾಗಿ ಅನುಬಂಧ-2ರಲ್ಲಿ ಸಲ್ಲಿಸುವುದು.

ಪ್ರತಿಗಳು:

1) ಮಾಹಿತಿ & ತಂತ್ರಜ್ಞಾನ ಅಧಿಕಾರಿಗಳು , ಮಾಹಿತಿ & ತಂತ್ರಜ್ಞಾನ ವಿಭಾಗ , ಕಾಶಿಇ, ಕೇಂದ್ರ ಕಛೇರಿ ಬೆಂಗಳೂರು- ಇಲಾಖಾ ಜಾಲತಾಣದಲ್ಲಿ ಪ್ರಕಟಿಸಲು.
2) ಮ್ಯಾನೇಜರ್/ಅಧೀಕ್ಷಕರು, ಹಣ ಮತ್ತು ಪಾವತಿ ವಿಭಾಗ ಕಾಶಿಇ ಕೇಂದ್ರ ಕಛೇರಿ ಬೆಂಗಳೂರು.- ಮಾಹಿತಿಗಾಗಿ
3) ಮ್ಯಾನೇಜರ್/ಅಧೀಕ್ಷಕರು, ಹೆಚ್.ಆರ್.ಎಂ.ಎಸ್ ವಿಭಾಗ ಕಾಶಿಇ ಕೇಂದ್ರ ಕಛೇರಿ ಬೆಂಗಳೂರು.- ಮಾಹಿತಿಗಾಗಿ
4) ಕಛೇರಿ ಪ್ರತಿ

# ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯಡಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಬೋಧಕರು/ಬೋಧಕೇತರರುಗಳ ವೇತನ ಬಾಕಿ ಮತ್ತು ಇತರೆ ಬಾಕಿಗಳ ವಿವರ

ಅನುಬಂಧ-1

| | |
|---|---|
| ಕಾಲೇಜಿನ ಹೆಸರು | |
| ಕಾಲೇಜಿನ ವಿಳಾಸ | |
| ಪ್ರಾಂಶುಪಾಲರ ಹೆಸರು | |
| ಪ್ರಾಂಶುಪಾಲರ ದೂರವಾಣಿ ಸಂಖ್ಯೆ. | |

| K1 DDO CODE | | K2 DDO CODE | |
|---|---|---|---|

| ಕ್ರ.ಸ | ಹೆಸರು ಮತ್ತು ಪದನಾಮ | TYPE OF ARREARS | ಅವಧಿ | | GRANTS REQUIRED FOR ARREARS UNDER THE HEAD OF ACCOUNT | | | | | ಒಟ್ಟು | 2022-23ನೇ ಸಾಲಿನಲ್ಲಿ ಹಿಂಬಾಕಿಯನ್ನು ಪಾವತಿಸದೇ ಇರಲು ಸೂಕ್ತ ಸಮರ್ಥನೆ(ಅಗತ್ಯ ದಾಖಲಾತಿಗಳೊಂದಿಗೆ ಸಲ್ಲಿಸುವುದು) |
|---|---|---|---|---|---|---|---|---|---|---|---|
| | | | ಇಂದ | ವರೆಗೆ | 002 OFFICERS PAY | 003 STAFF PAY | 011 DA | 014 HRA & OTHERS | 020 MED | | |
| 1 | | | | | | | | | | | |
| 2 | | | | | | | | | | | |
| 3 | | | | | | | | | | | |
| 4 | | | | | | | | | | | |
| 5 | | | | | | | | | | | |
| 6 | | | | | | | | | | | |
| 7 | | | | | | | | | | | |
| 8 | | | | | | | | | | | |
| 9 | | | | | | | | | | | |
| 10 | | | | | | | | | | | |
| | | TOTAL | | | | | | | | | |

ಈ ಮೇಲ್ಕಂಡ ಕೋಷ್ಟಕದಲ್ಲಿರುವ ಎಲ್ಲಾ ಮಾಹಿತಿಯನ್ನು ಕಾಲೇಜಿನಲ್ಲಿರುವ ವೇತನ ಬಟವಾಡೆ ರಿಜಿಸ್ಟರ್ ಮತ್ತು HRMS ವರದಿಗಳು ಹಾಗೂ ಮಹಾಲೇಖಪಾಲರ ವೇತನ ಪತ್ರ(AG PAY SLIP)ನಲ್ಲಿರುವಂತೆ ನಮೂದಿಸಲಾಗಿದ್ದು ಸದರಿ ಮಾಹಿತಿಯು ಪರೀಶಿಲಿಸಲಾಗಿದ್ದು, ಸರಿಯಾಗಿದೆ ಎಂದು ದೃಡೀಕರಿಸಲಾಗಿದೆ.

ಸ್ಥಳ :

ದಿನಾಂಕ:

ವ್ಯವಸ್ಥಾಪಕರು/ಅಧೀಕ್ಷಕರು/ಕಛೇರಿ ಸಿಬ್ಬಂದಿಯವರ ಸಹಿ

ಪ್ರಾಂಶುಪಾಲರ ಸಹಿ

## ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯಡಿ ಬರುವ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಬೋಧಕರು/ಬೋಧಕೇತರರುಗಳ ವೇತನ ಬಾಕಿ ಮತ್ತು ಇತರೆ ಬಾಕಿಗಳ ವಿವರ

ಅನುಬಂಧ-2

| | | | |
|---|---|---|---|
| ಪ್ರಾದೇಶಿಕ ಕಛೇರಿ ಹೆಸರು | | | |
| ಪ್ರಾದೇಶಿಕ ಕಛೇರಿ ವಿಳಾಸ | | | |
| ಜಂಟಿ ನಿರ್ದೇಶಕರ ಹೆಸರು | | | |
| ಜಂಟಿ ನಿರ್ದೇಶಕರ ದೂರವಾಣಿ ಸಂಖ್ಯೆ | | | |
| K1 DDO CODE | | K2 DDO | |

| ಕ್ರ.ಸ | ಹೆಸರು ಮತ್ತು ಪದನಾಮ | ಕಾಲೇಜಿನ ಹೆಸರು | TYPE OF ARREARS | ಅವಧಿ | | | ಒಟ್ಟು | ಅನುಮೋದನೆ ದಿನಾಂಕ | 2022-23ನೇ ಸಾಲಿನಲ್ಲಿ ಹಿಂಬಾಕಿಯನ್ನು ಪಾವತಿಸದೇ ಇರಲು ಸೂಕ್ತ ಸಮರ್ಥನೆ(ಅಗತ್ಯ ದಾಖಲಾತಿಗಳೊಂದಿಗೆ ಸಲ್ಲಿಸುವುದು) |
|---|---|---|---|---|---|---|---|---|---|
| | | | | ಇಂದ | ವರೆಗೆ | ಲೆಕ್ಕ ಶೀರ್ಷಿಕೆ ವಿವರ | | | |
| 1 | | | | | | | | | |
| 2 | | | | | | | | | |
| 3 | | | | | | | | | |
| 4 | | | | | | | | | |
| 5 | | | | | | | | | |
| 6 | | | | | | | | | |
| 7 | | | | | | | | | |
| 8 | | | | | | | | | |
| 9 | . | | | | | | | | |
| 10 | | | | | | | | | |
| TOTAL | | | | | | | | | |

ಈ ಮೇಲ್ಕಂಡ ಕೋಷ್ಟಕದಲ್ಲಿರುವ ಎಲ್ಲಾ ಮಾಹಿತಿಯನ್ನು ಕಾಲೇಜಿನಲ್ಲಿರುವ ವೇತನ ಬಟವಾಡೆ ರಿಜಿಸ್ಟರ್ ಮತ್ತು HRMS ವರದಿಗಳು ಹಾಗೂ ಜಂಟಿ ನಿರ್ದೇಶಕರ ಕಛೇರಿಯಲ್ಲಿ ಅನುಮೋದನೆಯಲ್ಲಿರುವಂತೆ ನಮೂದಿಸಲಾಗಿದ್ದು ಸದರಿ ಮಾಹಿತಿಯು ಪರಿಶೀಲಿಸಲಾಗಿದ್ದು, ಸರಿಯಾಗಿದೆ ಎಂದು ದೃಢೀಕರಿಸಲಾಗಿದೆ.

ಸ್ಥಳ :

ದಿನಾಂಕ:

ಲೆಕ್ಕಾಧಿಕಾರಿಗಳು/ ಕಛೇರಿ ಅಧಿಕಾರಿಗಳು

ಜಂಟಿ ನಿರ್ದೇಶಕರ ಸಹಿ